(ಇಂದು ದಿನಾಂಕಃ 02–08–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಸಿ ಸಿ ಎ ವಕೀಲರಿಂದ ಃ -

1) ನಾನು ಆಸ್ತಿಯನ್ನು ಖರೀದಿ ಪಡೆದ ದಿನಾಂಕ ನೆನಪಿಲ್ಲ. ಅದರ ಸರ್ವೆ ಸಂಖ್ಯೆ 3105 ಬಿ ಇರುತ್ತದೆ. ಅದರ ಚಕಬಂದಿ ನೆನಪಿಲ್ಲ. ನಾನು ಖರೀದಿ ಪಡೆಯುವ ಪೂರ್ವದಲ್ಲಿ ಪ್ರತಿವಾದಿಯರು ಅವರ ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ನಾನು 27-01-2023 ರಂದು ಅಲ್ಲಿ ಬಂದಿರುತ್ತೇನೆ. ನಾನು ಬರುವ ಪೂರ್ವದಲ್ಲಿಯೆ ಪ್ರತಿವಾದಿಯರು ಅಲ್ಲಿ ಮನೆ ಹಾಗೂ ಕಂಪೌಂಡ ಗೋಡೆಯನ್ನು ಕಟ್ಟಿ ವಾಸ ಮಾಡಿಕೊಂಡು ಇದ್ದರು ಎಂದರೆ ಸರಿ. ನನಗೆ ಪ್ರತಿವಾದಿಯರು ನೀರಿನ ಸಮಸ್ಯೆ ಇದ್ದಾಗ ನೀರು ನೀಡುತ್ತಿದ್ದರು ಅಂದರೆ ಸರಿಯಲ್ಲ.

2) ಅಲ್ಲಿ 3 ಪ್ಲಾಟಗಳು 46, 47 ಹಾಗೂ 48 ಉತ್ತರ ಮುಖವಾಗಿ ಇರುತ್ತವೆ ಎಂದರೆ ಸರಿ. ಉತ್ತರಕ್ಕೆ ರಸ್ತೆ ಎಂದರೆ ಸರಿ. 48 ರ ಪೂರ್ವ ಭಾಗಕ್ಕೆ ಉತ್ತರ ದಕ್ಷಿಣ 3 ಅಡಿ ಅಗಲ ಖುಲ್ಲಾಜಾಗ ಎಂದರೆ ನನಗೆ ಗೊತ್ತಿಲ್ಲ. ಅದರ ನಂತರದಲ್ಲಿ ವಿರೇಶ ರವರಿಗೆ ಸೇರಿದ ಆಸ್ತಿ ಇರುತ್ತದೆ ಎಂದರೆ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ.

3) ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿ ಅದು 1 ನೇ ಪ್ರತಿವಾದಿಯು ತಾನು ನಿರ್ಮಾಣ ಮಾಡಿದ ಮನೆಯ ಇ-ಸ್ವತ್ತು ಎಂದರೆ ಸರಿ. ಸದರಿ ದಾಖಲೆಯನ್ನು ನಿ.ಡಿ.**1** ಎಂದು ಗುರುತಿಸಲಾಯಿತು. ನಾನು ದಿನಾಂಕ 01-02-2021 ರಂದು ನನ್ನ ಪ್ಲಾಟನ್ನು ಖರೀದಿ ಹಿಡಿದಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ನಾನು ಸದರಿ ದಿನಾಂಕದಂದು ಕಲಾವತಿ ಸಿಕ್ಕೆದೇಸಾಯಿ ರವರಿಂದ ಆಸ್ತಿ ಖರೀದಿ ಪಡೆದ ಬಗ್ಗೆ ದಾಖಲೆಯಲ್ಲಿ ನಮೂದು ಇರುತ್ತದೆ ಎಂದರೆ ಸರಿ.

4) ದಾವಾ ಆಸ್ತಿಯ ವಿಸ್ತೀರ್ಣ ಹೇಳಲು ಬರುವುದಿಲ್ಲ. ದಾವಾ ಆಸ್ತಿ ಎಂದರೆ ಏನು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯವು ಸಾಕ್ಷಿಗೆ ದಾವಾ ಆಸ್ತಿಯ ವಿವರಣೆಯನ್ನು ನೀಡಿರುತ್ತದೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 4 ಮತ್ತು 5 ನೇ ಕಂಡಿಕೆಯಲ್ಲಿ ಸುಳ್ಳು ಸಂಗತಿಗಳನ್ನು ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ಮೋಜನಿ ಅಥವಾ ಅನುಮತಿ ಪಡೆಯುವ ಸಮಯದಲ್ಲಿ ನಾನು ಇರಲಿಲ್ಲ ಅದರ ಪೂರ್ವ ಮಾಲೀಕರು ಇದ್ದರು ಎಂದರೆ ಸರಿ.

5) ಪ್ರತಿವಾದಿಯರಿಗೆ ಲಗತ್ತು ಕಬ್ಜೆದಾರರ ಪರವಾನಿಗೆಯನ್ನು ಪಡೆದು ಪುರಸಭೆ ರವರು ಕಟ್ಟಡ ನಿರ್ಮಾಣ ಪರವಾನಿಗೆಯನ್ನು ನೀಡಿರುತ್ತಾರೆ ಅಂದರೆ ಸರಿಯಲ್ಲ. ಪ್ರತಿವಾದಿಯರು ಪುರಸಭೆಯ ಪರವಾನಿಗೆಯ ಅನುಸಾರ ಕಾನೂನು ರೀತಿಯಲ್ಲಿ ಮನೆ ಹಾಗೂ ಕಂಪೌಂಡ ನಿರ್ಮಾಣ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಪೂರ್ವದಲ್ಲಿಯೆ ಮನೆ ಹಾಗೂ ಕಂಪೌಂಡ ನಿರ್ಮಾಣ ಮಾಡಿದ್ದು ನಾನು ಅಗಿನ ಲಗತ್ತು ಮಾಲೀಕನು, ಕಬ್ಜೆದಾರನು ಆಗದೇ ಇದ್ದರು ಸಹ ಕಾನೂನು ಬಾಹಿರ ನಿರ್ಮಾಣ ಮಾಡಿರುತ್ತಾರೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

6) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 6 ನೇ ಕಂಡಿಕೆಯಲ್ಲಿ ಉಲ್ಲೇಖಿಸಿದ ಅತೀಕ್ರಮಣದವಾದ ಬಗ್ಗೆ, ಮೋಜನಿ ಮಾಡಿದ ಬಗ್ಗೆ ಹಾಗೂ ಮೋಜನಿ ಇಲಾಖೆಯವರು ಅತೀಕ್ರಮಣ ಆಗಿದೆ ಎಂದು ವರದಿ ನೀಡಿದ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮೋಜನಿ ಸಮಯದಲ್ಲಿ ನಾನು, 1 ನೇ ಪ್ರತಿವಾದಿ ಅವರ ತಂದೆ ಹಾಗೂ ಮೋಜನಿ ಇಲಾಖೆಯವರು ಇದ್ದರು. ಮೋಜನಿ ಇಲಾಖೆಯವರು ಅವರ ಇಲಾಖಾ ನಕಾಶೆ ಹಾಗೂ ಉಪಕರಣಗಳನ್ನು ತಂದಿರುತ್ತಾರೆ ನಾನು ನಕಾಶೆಯನ್ನು ನೋಡಿರುತ್ತೇನೆ.

7) ಸಾಮಾನ್ಯವಾಗಿ ಮೋಜನಿ ಮಾಡುವ ಪೂರ್ವದಲ್ಲಿ ಮೂಲ ಗಡಿಕಲ್ಲನ್ನು ಗುರುತು ಮಾಡುತ್ತಾರೆ ಎಂದರೆ ಸರಿ. ನಮ್ಮ ಅಳತೆಯಲ್ಲಿ ಗಡಿಕಲ್ಲನ್ನು ಪಕ್ಕದ ಆಸ್ತಿಯಿಂದ ಗುರುತು ಮಾಡಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 7 ನೇ ಕಂಡಿಕೆಯಲ್ಲಿ ಸುಳ್ಳು ಸಂಗತಿಗಳನ್ನು ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ.

8) ದಿನಾಂಕ 08-09-2022 ರಂದು ನನಗೆ ದಾವಾ ಕಾರಣ ಉಂಟಾಗಿದೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಯಾವುದೇ ದಾವಾ ಕಾರಣ ಉಂಟಾಗಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರು ಕಲಾವತಿ ಸಿಕ್ಕೆದೇಸಾಯಿ ರವರಿಂದ 1 ಗುಂಟೆ 13 ಆಣೆ ಆಸ್ತಿಯನ್ನು ಖರೀದಿ ಪಡೆದುಕೊಂಡಿರುತ್ತಾರೆ ಎಂದರೆ ಪಡೆದಿರಬಹುದು ನನಗೆ ಗೊತ್ತಿಲ್ಲ. ಸದರಿ ಪ್ಲಾಟನಲ್ಲಿ ದಿನಾಂಕ 21-02-2018 ರಂದು ಪುರಸಭೆಯ ಪರವಾನಿಗೆ ಪಡೆದು ಕೆನರಾ ಬ್ಯಾಂಕ ಅಣ್ಣಿಗೇರಿ ರವರಲ್ಲಿ ದಿನಾಂಕ 21-05-2018 ರಂದು ಸಾಲವನ್ನು ಪಡೆದು ಅದರಿಂದ ಮನೆ ಹಾಗೂ ಕಂಪೌಂಡ ನಿರ್ಮಾಣ ಮಾಡಿರುತ್ತಾರೆ ಎಂದರೆ ನಾನು ಇರಲಿಲ್ಲ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

9) ದಿನಾಂಕ 18-02-2019 ರಂದು ಪುರಸಭೆ ರವರು ಪ್ರತಿವಾದಿಯವರಿಗೆ ಸ್ವಾಧಿನ ಅನುಬೋಗ ಪ್ರಮಾಣ ಪತ್ರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಂದಿನಿಂದ ಪ್ರತಿವಾದಿಯರು ವಾಸ ಮಾಡುತ್ತಾ ಬಂದಿರುತ್ತಾರೆ ಎಂದರೆ ನಾನು ಇರಲಿಲ್ಲ. ನಾನು ಬಂದ ಮೇಲೆ ಅವರು ಇದ್ದರು. ನಾನು ಖರೀದಿ ಪಡೆಯುವ ಪೂರ್ವದಲ್ಲಿ ಪ್ರತಿವಾದಿಯರ ಮನೆ ಹಾಗೂ ಕಂಪೌಂಡ ನಿರ್ಮಾಣವಾಗಿತ್ತು ಎಂದರೆ ಸರಿ.

10) ಸಾಮಾನ್ಯವಾಗಿ ಖರೀದಿ ಮಾಡುವ ಪೂರ್ವದಲ್ಲಿ ಅಳತೆ ಮಾಡಿಸುತ್ತಾರೆ ಎಂದರೆ ಸರಿ. ನಾನು ಖರೀದಿ ಮಾಡುವ ಪೂರ್ವದಲ್ಲಿ ಸ್ಥಳಚೌಕಾಸಿ ಮಾಡಿರುತ್ತೇನೆ. ಸ್ಥಳಚೌಕಾಸಿ ಮಾಡಿದ ನಂತರ ಖರೀದಿ ಪತ್ರ ಮಾಡಲಾಗಿರುತ್ತದೆ ಎಂದರೆ ಸರಿ. ಖರೀದಿ ಸಮಯದಲ್ಲಿ ಯಾವುದೇ ತಕರಾರು ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಕಂಪೌಂಡ ನಿರ್ಮಾಣ ಮಾಡುವ ಸಮಯದಲ್ಲಿ ವಿವಾದ ಬಂದಿರುತ್ತದೆ.

11) ನನ್ನ ಮನೆ ನಿರ್ಮಾಣಕ್ಕೆ ಅನುಮತಿಯನ್ನು ಪಡೆದುಕೊಂಡಿರುತ್ತೇನೆ ದಿನಾಂಕ ನೆನಪಿಲ್ಲ. ಸಾಮಾನ್ಯವಾಗಿ ಪುರಸಭೆ ರವರು ಸ್ಥಳ ಪರಿಶೀಲನೆ ಮಾಡಿ ಪರವಾನಿಗೆ ನೀಡುತ್ತಾರೆ ಎಂದರೆ ಸರಿ. ಪುರಸಭೆರವರು ನನಗೆ ಕಬ್ಜಾ ಪ್ರಮಾಣ ಪತ್ರ ನೀಡಿರುತ್ತಾರೆ ಆದರೆ ಆ ಸಮಯದಲ್ಲಿ ತಕರಾರು ಪ್ರಾರಂಭವಾಗಿರುತ್ತದೆ. ದಿನಾಂಕ ನಿಖರವಾಗಿ ಗೊತ್ತಿಲ್ಲ. ಪುರಸಭೆ ರವರು ಸ್ಥಳ ಪರಿಶೀಲನೆಯ ಸಮಯದಲ್ಲಿ ತಕರಾರು ಬಂದಿರುವುದಿಲ್ಲ. ಪುರಸಭೆ ರವರು ಸ್ಥಳ ಪರಿಶೀಲನಾ ಸಮಯದಲ್ಲಿ ಯಾವುದೇ ತಕರಾರು ಬರದೇ ಇದ್ದರು ಸಹ ಈಗ ನಾನು ಸುಳ್ಳು ಸಂಗತಿಯ ಮೇರೆಗೆ ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

12) ಪ್ರತಿವಾದಿಯರು ಕಾನೂನು ರೀತಿಯಲ್ಲಿ ಮೋಜನಿ ಮಾಡಿ ಪರವಾನಿಗೆ ಪಡೆದು, ಪರವಾನಿಗೆ ಪಡೆಯುವ ಸಮಯದಲ್ಲಿ ಸ್ಥಳ ಪರಿಶೀಲನೆ ಮಾಡಿಸಿ, ನಂತರ ನಿರ್ಮಾಣ ಮಾಡಿ ಅದರ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಾನೂನು ರೀತಿಯಲ್ಲಿ ನಡೆದುಕೊಂಡರು ಸಹ ಸುಳ್ಳು ಸಂಗತಿಗಳನ್ನು ಕಾಣಿಸಿ, ಸುಳ್ಳು ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಆಸ್ತಿ ಬಿಡಿಸಲು ಹಿರಿಯರಾದ ಷಣ್ಮುಕ ಗುರಿಕಾರ ಮತ್ತು ಇತರರು ಇದ್ದರು ಅವರ ಹೆಸರು ಈಗ ನೆನಪಿಲ್ಲ ಅವರು ಏನು ಹೇಳಿದ್ದು ಇರುವುದಿಲ್ಲ ಸುಮ್ಮನೆ ನಿಂತಿದ್ದರು. ಹಿರಿಯರು ನನಗೆ ಪ್ರತಿವಾದಿಯರು ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದು ಬುದ್ದಿಮಾತನ್ನು ಹೇಳಿದ್ದರು ಸಹ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

13) ನನಗೆ ಯಾವುದೇ ದಾವಾ ಕಾರಣ ಉಂಟಾಗಿಲ್ಲ ನಾನು ಸುಳ್ಳು ಸಂಗತಿಯ ಮೇರೆಗೆ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಕೋರಿಕೆ 2 ಕ್ಕೆ ಸಂಬಂದ ಕೋರ್ಟ ಫೀ ಭರಣ ಮಾಡಿದ ಬಗ್ಗೆ ವಕೀಲರಿಗೆ ಕೇಳಬೇಕು. ಪ್ರತಿವಾದಿಯರಿಗೆ ತೊಂದರೆ ನೀಡುವ ದೂರುದ್ದೇಶದಿಂದ ಹಾಗೂ ಅವರಿಗೆ ವಂಚನೆ ಮಾಡಬೇಕೆಂಬ ಉದ್ದೇಶದಿಂದ ಮತ್ತು ಅವರಿಂದ ಹಣವನ್ನು ವಸೂಲಿ ಮಾಡುವ ದೂರುದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**